ಈ ಲೇಖನದ ವಿಷಯಾನುಕ್ರಮಣಿಕೆ

**ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಮೂವತ್ತನೆಯ ಪದ್ಯ** 2

**ಬಲಿಯ ಬಂಧಿಸಿ** 3

**ಮೊರೆಯಿಡುವ ಸತಿಗೊಲಿದು ಅಕ್ಷಯವಿತ್ತು** 4

**ಮೊಲೆಯನುಣಿಸಿದ ಬಾಲಿಕೆಯ ಕರುಣದಿ ಪಿಡಿದು ಅಸುವನಪಹರಿಸಿ** 5

**ಶಿಲೆಯ ಸತಿಯಳ ಮಾಡಿ** 10

# ವಿಶ್ವನಂದಿನಿ ಲೇಖನಮಾಲೆ – 71

## ಸಾರಾಮೃತಯುಕ್ತವಾದ ಶ್ರೀ ಹರಿಭಕ್ತಿಸಾರ ಮೂವತ್ತನೆಯ ಪದ್ಯ

ಹೀಗೆಯೇ ಶಿಷ್ಟರನ್ನು ರಕ್ಷಿಸಿ ದುಷ್ಟರನ್ನು ಶಿಕ್ಷಿಸಿದ ಭಗವಂತನ ಮಾಹಾತ್ಮ್ಯವನ್ನು ಮುಂದಿನ ಎರಡು ಪದ್ಯಗಳಲ್ಲಿ ಚಿಂತಿಸುತ್ತಾರೆ –

**ಬಲಿಯ ಬಂಧಿಸಿ ಮೊರೆಯಿಡುವ ಸತಿ-**
**ಗೊಲಿದು ಅಕ್ಷಯವಿತ್ತು ಕರುಣದಿ**
**ಮೊಲೆಯನುಣಿಸಿದ ಬಾಲಿಕೆಯ ಪಿಡಿದಸುವನಪಹರಿಸಿ ।**
**ಶಿಲೆಯ ಸತಿಯಳ ಮಾಡಿ ತ್ರಿಪುರರ**
**ಲಲನೆಯರ ವ್ರತಗೆಡಿಸಿ ಕೂಡಿದ**
**ಕೆಲಸವುತ್ತಮವಾಯ್ತು ರಕ್ಷಿಸು ನಮ್ಮನನವರತ ॥ ೩೦ ॥**

# ಬಲಿಯ ಬಂಧಿಸಿ

ಬಲಿಯಲ್ಲಿಯೂ ಇಬ್ಬರು ಜೀವರು. ಇಬ್ಬರಿಗೂ ಬಲಿಯೆಂದೇ ಹೆಸರು. ಅವರಲ್ಲಿ ಅಸುರಬಲಿಯೇ ಸಾಲ್ವ ಎಂಬ ಹೆಸರನಿಂದ ಹುಟ್ಟಿಬಂದು ಭಗವದ್ದ್ವೇಷವನ್ನು ಮಾಡಿ ಶ್ರೀಕೃಷ್ಣನಿಂದ ಹತನಾಗುತ್ತಾನೆ. ಸಜ್ಜೀವ ಬಲಿ ಮುಂದಿನ ಮನ್ವಂತರದಲ್ಲಿ ಇಂದ್ರಪದವಿಯನ್ನು ಪಡೆಯುತ್ತಾನೆ. ಹೀಗೆ ಜೀವದ್ವಯರಿಂದ ಕೂಡಿದ್ದ ಪ್ರಹ್ಲಾದನ ಮೊಮ್ಮಗ ಬಲಿಯನ್ನು ಬಂಧಿಸಿ, ವಾಮನರೂಪಿಯಾದ ಪರಮಾತ್ಮ ಅವನಿಂದ ಎರಡು ಪಾದಗಳ ದಾನವನ್ನು ಪಡೆದ ತಕ್ಷಣ ಗರುಡ ಮೊದಲಾದ ವಿಷ್ಣುಪಾರ್ಷದರು ಬಲಿಯನ್ನು ವರುಣಪಾಶಗಳಿಂದ ಬಂಸುತ್ತಾರೆ, ಬಳಿಕ ವಾಮನ ಮೂರನೆಯ ಪಾದವನ್ನು ಅವನ ತಲೆಯ ಮೇಲಿಟ್ಟು ಪಾತಾಳಕ್ಕೆ ತಳ್ಳಿ ಅಲ್ಲಿ ಅವನಿಗೆ ರಾಕ್ಷಸಾಧಿಪತ್ಯವನ್ನು ನೀಡಿ ತಾನು ಅವನ ಮನೆಗಾಯುವ ಕೆಲಸ ಮಾಡಿ ಅವನಿಗೆ ಅನುಗ್ರಹವನ್ನು ಮಾಡುತ್ತಾನೆ.

## ಮೊರೆಯಿಡುವ ಸತಿಗೊಲಿದು ಅಕ್ಷಯವಿತ್ತು

ದುಃಶಾಸನ ಸೀರೆಯೆಳೆಯಲು ಬಂದಾಗ ಪ್ರತೀಕ್ಷಣದಲ್ಲಿಯೂ ಪರಮಾತ್ಮನನ್ನು ನೆನೆಯುವ ಸ್ವಭಾವದ ದ್ರೌಪದಿ ವಿಶೇಷವಾಗಿ ಆ ಸಂದರ್ಭದಲ್ಲಿ ನೆನೆಯುತ್ತಾಳೆ. ಅವಳ ಮೇಲೆ ಅನುಗ್ರಹ ಮಾಡಿದ ಶ್ರೀಕೃಷ್ಣ ಅವಳ ಪಾತಿವ್ರತ್ಯದ ಪ್ರಭಾವವನ್ನು ಇಡಿಯ ಸಭೆ ಕಾಣುವಂತೆ ಮಾಡುತ್ತಾನೆ. ಅವಳ ಭುಜದ ಮೇಲಿಂದ ಸೀರೆಯ ಸೆರಗನ್ನು ದುಃಶಾಸನ ಎಳೆಯುತ್ತಿದ್ದ ಹಾಗೆಯೇ ಮತ್ತೊಂದು ಸೀರೆ ಅವಳ ಭುಜದ ಮೇಲಿರುತಿತ್ತು. ಹೀಗೆ ಒಂದಲ್ಲ ಎರಡಲ್ಲ ಎಷ್ಟು ಬಾರಿ ದುಃಶಾಸನ ಎಳೆದನೋ ಅಷ್ಟು ಬಾರಿಯೂ ದ್ರೌಪದಿಯ ಮೈಮೇಲೆ ಹೊಸ ಸೀರೆಯೊಂದು ಇರುತ್ತಿತ್ತು. ಕಡೆಗೆ ಪಾಪಿ ದುಃಶಾಸನನೇ ಆಯಾಸದಿಂದ ಕೆಳಗುರುಳಿ ಬೀಳುತ್ತಾನೆ. ಕಾಯೆಂದು ಮೊರೆಯಿಟ್ಟ ದ್ರೌಪದಿಗೆ ಒಲಿದು ಅಕ್ಷಯವನ್ನಿತ್ತವನು ಅಕ್ಷಯವಸ್ತ್ರಗಳನ್ನಿತ್ತವನು.

# ಮೊಲೆಯನುಣಿಸಿದ ಬಾಲಿಕೆಯ ಕರುಣದಿ ಪಿಡಿದು ಅಸುವನಪಹರಿಸಿ

ಕಂಸನ ಅಣತಿಯಂತೆ ಆಗ ತಾನೇ ಹುಟ್ಟಿದ ಕೂಸುಗಳನ್ನು ಕೊಲ್ಲಲು ಹೊರಟ ಮಾಯಾವಿಗಳ ಅತೀ ದೊಡ್ಡ ಪಡೆಯಲ್ಲಿ ಕಂಸನನ್ನು ಚಿಕ್ಕಂದಿನಿಂದ ಸಾಕಿ ಬೆಳೆಸಿದ ಅವನ ಸಾಕುತಾಯಿ ಪೂತನಿಯೂ ಇರುತ್ತಾಳೆ. ಅವಳು ಬೃಹದ್ವನಕ್ಕೆ ಬಂದು ಕೃಷ್ಣನನ್ನು ಕೊಲ್ಲುವ ಸಂಚನ್ನು ಹೂಡುತ್ತಾಳೆ. ಏಳು ದಿವಸಗಳ ಹಿಂದಷ್ಟೇ ಹುಟ್ಟಿದ ನಂದ ಯಶೋದೆಯರ ಮಗುವನ್ನು ಕಾಣಲು ಗೋಕುಲದಿಂದ ಗೋಪ ಗೋಪಿಯರು ಹಿಂಡು ಹಿಂಡಾಗಿ ಬರುತ್ತಿರುತ್ತಾರೆ. ವಿಚಾರ ಮಾಡಿದ ಪೂತನಿ ತಾನೂ ಒಬ್ಬ ಗೋಪಿಯ ವೇಷವನ್ನು ಧರಿಸಿ ಕೃಷ್ಣನನ್ನು ನೋಡಲು ಹೋಗುತ್ತಾಳೆ. ಯಶೋದೆ ಆಯಾಸದಿಂದ ನಿದ್ರೆಗೊಳಗಾಗಿ, ಎಳೆಯುವ ಕಣ್ಣಿಳಿಂದಲೇ ಗೋಪಿಯ ವೇಷದ ಪೂತನಿ ಮಗುವನ್ನು ಎತ್ತೊಯ್ಯುತ್ತಿರುವದನ್ನು ಕಾಣತ್ತಾಳೆ. ಪೂತನಿಯ ಮಾಯೆಗೊಳಗಾಗಿ ಒಳ್ಳೆಯವಳಿರಬೇಕು ಇವಳು ಎಂದು ಯೋಚಿಸಿ ನಿದ್ರಾವಶಳಾಗಿಬಿಡುತ್ತಾಳೆ.

ಪೂತನಿ ಮಗುವನ್ನು ದೂರಕ್ಕೆ ಕರೆದುಕೊಂಡು ಬಂದು, ತನ್ನ ಮೊಲೆಯ ವಿಷದ ಹಾಲನ್ನು ಕೃಷ್ಣನಿಗೆ ಕುಡಿಸಲು ಪ್ರಯತ್ನಿಸುತ್ತಾಳೆ. ಅದ್ಭುತ ಲೀಲಾಪ್ರಿಯನಾದ ಶ್ರೀಕೃಷ್ಣ ಹಸಿದಿರುವ ಕೂಸಿನ ಹಾಗೆ ಗಟ್ಟಿಯಾಗಿ ಅವಳ ಮೊಲೆಗಳನ್ನು ಹಿಡಿದು ಹಾಲು ಕುಡಿಯುವವನ ಹಾಗೆ ಮಾಡಿ ಅವಳ ಪ್ರಾಣವನ್ನೇ ಹೀರಿಬಿಡುತ್ತಾನೆ. ಮೊಲೆಯನ್ನು ಕಚ್ಚಿ ಹಿಡಿದ ಶ್ರೀಕೃಷ್ಣನನ್ನು ತಳ್ಳಿ ಎಸೆಯಲು ಪ್ರಯತ್ನಿಸಿದ ಪೂತನಿ ಸಾಧ್ಯವಾಗದೆ ಜೀವವನ್ನು ಕಳೆದುಕೊಂಡು ತನ್ನ ಸುಭೀಷಣವಾದ ಧ್ವನಿಯಿಂದ ಅರಚುತ್ತಾ ಪರಮಭೀಷಣವಾದ ತನ್ನ ಮೊದಲಿನ ರೂಪದಲ್ಲಿ ಸತ್ತು ಬೀಳುತ್ತಾಳೆ. ಇದು ನಡೆದ ಘಟನೆ.

ಆದರೆ ದಾಸರು ಪರಮಾತ್ಮನನ್ನು ಕೇವಲ ಪೂತನಾಸಂಹಾರಿ ಎಂದಷ್ಟೇ ಇಲ್ಲಿ ಚಿಂತಿಸುತ್ತಿಲ್ಲ. ಶ್ರೀಮದಾಚಾರ್ಯರು ತಾತ್ಪರ್ಯನಿರ್ಣಯದಲ್ಲಿ ಹೇಳಿರುವ ಮತ್ತಷ್ಟು ಮಾತುಗಳನ್ನು ಅವರು "ಕರುಣದಿ" "ಬಾಲಿಕೆಯ" ಎಂಬ ಶಬ್ದಗಳಿಂದ ಅನುಸಂಧಾನ ಮಾಡುತ್ತಿದ್ದಾರೆ. ಸಾವಿರಾರು

ಹಸುಗೂಸುಗಳನ್ನು ಕೊಲ್ಲುವದಕ್ಕೆ ಭೃತ್ಯರನ್ನು ಕಳುಹಿಸಲು ಕಂಸನಿಗೆ ಪ್ರೇರಣೆ ನೀಡಿ ತಾನೂ ಸಹ ಹುಟ್ಟಿದ ಮಕ್ಕಳನೆಲ್ಲ ಕೊಂದುಕೊಂಡು ಬರುತ್ತಿರುವ ದುಷ್ಟಳಾದ ಪೂತನಿಯ ಮೇಲೆ ಪರಮಾತ್ಮನಿಗೆ ಕರುಣೆಯೆಲ್ಲಿಯದು ? ಅವನು ಅಸುರಜನವಿರೋಧಿ. ಮತ್ತೂ ಶ್ರೀಕೃಷ್ಣನ ಸೋದರಮಾವನಾದ ಕಂಸನನ್ನು ಹಿಡಿದೆತ್ತಿ ಆಡಿ ಬೆಳೆಸಿದ ಪೂತನಿ ಎಲ್ಲಿಯ ಬಾಲಿಕೆ ? ಈ ಎರಡು ಶಬ್ದಗಳು ಪೂತನಿಯನ್ನು ಕುರಿತು ಹೇಳಿದ್ದಲ್ಲ. ಪೂತನಿಯಲ್ಲೂ ಸಹ ಇಬ್ಬರು ಜೀವರು. ಒಬ್ಬಳು ರಾಮಾವತಾರದಲ್ಲಿ ಪರಮಾತ್ಮನಿಂದ ಹತಳಾದ ದುಷ್ಟ ತಾಟಕೆ. ಎರಡನೆಯವಳು ಊರ್ವಶಿ.

ಒಮ್ಮೆ ಊರ್ವಶಿ ತುಂಬುರುವಿನ ಸಂಪರ್ಕ ಮಾಡಿ ಕುಬೇರನಿಂದ ರಾಕ್ಷಸಿಯಾಗುವಂತೆ ಶಾಪ ಪಡೆದು ತಾಟಕೆ ಪೂತನಿಯಾಗಿ ಹುಟ್ಟಿದಾಗ ಅವಳಲ್ಲಿ ಆವಿಷ್ಟಳಾಗಿ ಹುಟ್ಟಿ ಬಂದಿರುತ್ತಾಳೆ. ಈ ಊರ್ವಶಿ ಯಮಧರ್ಮನ ಮಗನಾಗಿ ಅವತರಿಸಿದ ನಾರಾಯಣರೂಪದ ಪರಮಾತ್ಮನ ಮಗಳು. ತಪಸ್ಸಿನ ಆಚರಣೆಯಲ್ಲಿ ತೊಡಗಿದ್ದ ನಾರಾಯಣನ ಮನಸ್ಸನ್ನು ಕೆಡಿಸಲು ಇಂದ್ರ ಅಪ್ಸರಸೆಯರನ್ನು

ಕೊಟ್ಟು ಕಳುಹಿಸುತ್ತಾನೆ. ಅದೆಷ್ಟು ಹಾವಭಾವಗಳನ್ನು ತೋರುತ್ತಾ ಎಷ್ಟು ನೃತ್ಯ ಮಾಡಿದರೂ ವಿಚಲಿತನಾಗದ ನಾರಾಯಣನನ್ನು ಕಂಡು ಅಪ್ಸರಸೆಯರೆಲ್ಲ ಬಳಲಿ ಹೋಗುತ್ತಾರೆ. ಆಗ ಕಣ್ತೆರೆದ ನಾರಾಯಣ ತನ್ನ ತೊಡೆಯಿಂದ ಊರ್ವಶಿಯನ್ನು ಸೃಷ್ಟಿಸಿ ಅವರ ಬಳಿ ಕಳುಹಿಸುತ್ತಾನೆ. ತಮ್ಮೆಲ್ಲ ಸೌಂದರ್ಯವನ್ನೂ ಮೀರಿಸಿದ ಅಪ್ರತಿಮ ಸೌಂದರ್ಯದ ಹೆಣ್ಣು ಪರಮಾತ್ಮನ ಮಗಳು ಎಂದು ತಿಳಿದ ಆ ಅಪ್ಸರಸೆಯರು ಸ್ವರ್ಗಕ್ಕೆ ಹಿಂತಿರುಗುತ್ತಾರೆ. ಹೀಗಾಗಿ ಊರ್ವಶಿ ಪರಮಾತ್ಮನ ಮಗಳು. ಅದಕ್ಕಾಗಿಯೇ ದಾಸರು ಬಾಲಿಕೆಯ ಪಿಡಿದು ಎಂಬ ಶಬ್ದವನ್ನು ಬಳಸಿದ್ದಾರೆ.

ಪೂತನಿಯಲ್ಲಿದ್ದ ಊರ್ವಶಿಯನ್ನು ಪರಮಾತ್ಮ ಸ್ಪರ್ಶಿಸಿದ್ದರಿಂದ, ಅವಳಿತ್ತ ಮೊಲೆಯನ್ನು ಕುಡಿದಿದ್ದರಿಂದ ಅವಳ ಪಾಪ ಪರಿಹೃತವಾಗಿ ಅವಳು ಸ್ವರ್ಗಕ್ಕೆ ಹಿಂತಿರುಗುತ್ತಾಳೆ “ಕೃಷ್ಣಸ್ಪರ್ಶಾತ್ ಶುದ್ಧಭಾವಾ” “ಕೃಷ್ಣಭುಕ್ತಸ್ತನೇನ ಪೂತಾ” ಎಂದು ಶ್ರೀಮದಾಚಾರ್ಯರು ಹೇಳುತ್ತಾರೆ.

ಅಷ್ಟೇ ಅಲ್ಲ, ದಾಸರು ಬಳಸಿರುವ ಕರುಣದಿ ಎಂಬ ಶಬ್ದವೂ ಸಹ ಬಹಳ ಮಹತ್ತ್ವದ್ದು. ಸಾಮಾನ್ಯವಾಗಿ ದೇವತೆಗಳಿಗೆ ಹಿರಿಯ ದೇವತೆಗಳು ಕೋಪದಿಂದ ಶಾಪ ನೀಡಿದ ಬಳಿಕ ಅವರ ಪ್ರಾರ್ಥನೆಯಿಂದ ಕೋಪ ತಗ್ಗಿದ ಮೇಲೆ ಆ ಶಾಪ ಪರಿಹಾರವಾಗುವ ರೀತಿಯನ್ನು ತಿಳಿಸಿರುತ್ತಾರೆ. ಆದರೆ ಕುಬೇರ ಊರ್ವಶಿಗೆ ಶಾಪ ಪರಿಹಾರವಾಗುವ ಹಾಗೆ ಅನುಗ್ರಹಿಸಿರುವದಿಲ್ಲ. ಹೀಗಾಗಿ ಅವಳು ರಾಕ್ಷಸಿಯಾಗಿಯೇ ಉಳಿಯಬೇಕಾದ ಪ್ರಸಂಗ ಬಂದಿರುತ್ತದೆ. ತನ್ನ ಮಗಳಾದ, ತನ್ನ ಭಕ್ತಳಾದ ಊರ್ವಶಿಗೆ ಈ ಪ್ರಸಂಗ ಬಂದದ್ದನ್ನು ಕಂಡು ಕರಗಿದ ಶ್ರೀಕೃಷ್ಣ ತನಗೆ ವಿಷದ ಹಾಲನ್ನುಣಿಸುವ ಮುಖಾಂತರ ತನ್ನನ್ನು ಕೊಲ್ಲುವ ಬುದ್ಧಿಯನ್ನು ಪೂತನಿಗೆ ನೀಡಿ, ಆ ಕಾರಣದಿಂದ ತಾನು ಊರ್ವಶಿಯನ್ನು ಸ್ಪರ್ಶ ಮಾಡಿ ಅವಳ ಪಾಪವನ್ನು ಪರಿಹರಿಸಿ ಅವಳಿಗೆ ಪಾಪಪರಿಹಾರವಾಗಿ ಸ್ವರ್ಗಪ್ರಾಪ್ತಿಯಾಗುವ ಹಾಗೆ ಮಾಡುತ್ತಾನೆ. ಶ್ರೀಮದಾಚಾರ್ಯರು ಈ ಮಾತನ್ನು ಬಹಳ ಸೊಗಸಾಗಿ ತಾತ್ಪರ್ಯನಿರ್ಣಯದಲ್ಲಿ ನಿರೂಪಿಸುತ್ತಾರೆ “ಕೃಷ್ಣಸ್ಪರ್ಶಾತ್ ಶುದ್ಧಭಾವಾ

ಪುನರ್ದಿವಂ ಯಯೌ ತುಷ್ಟೇ ಕಿಮಲಭ್ಯಂ ರಮೇಶೇ” ಎಂದು. ಹೀಗೆ ಆಚಾರ್ಯರು ತಿಳಿಸಿರುವ ಮಾತನ್ನು ಶ್ರದ್ಧೆಯಿಂದ ಅಧ್ಯಯನ ಮಾಡಿರುವ ದಾಸರು ತುಂಬ ಸುಂದರವಾಗಿ ಆ ವಿಷಯಗಳನ್ನು ಹರಿಭಕ್ತಿಸಾರದಲ್ಲಿ ನಿರೂಪಿಸಿ ಪರಮಾತ್ಮನನ್ನು ಸ್ತುತಿಸುತ್ತಾರೆ.

## ಶಿಲೆಯ ಸತಿಯಳ ಮಾಡಿ

ಇಂದ್ರನ ಸಂಗ ಮಾಡಿದಳು ಎಂಬ ಕಾರಣಕ್ಕೆ ಗೌತಮಋಷಿಗಳು ತಮ್ಮ ಪತ್ನಿ ಅಹಲ್ಯೆಗೆ ಶಿಲೆಯಾಗುವಂತೆ ಶಾಪವನ್ನೀಯುತ್ತಾರೆ. ಶ್ರೀರಾಮಚಂದ್ರ ಅವಳಿಗೆ ತನ್ನ ದರ್ಶನವನ್ನಿತ್ತು ಶಾಪವಿಮೋಚನೆಯನ್ನು ನೀಡುತ್ತಾನೆ. ಅಷ್ಟೇ ಅಲ್ಲ, ಮುನಿಸಿಕೊಂಡಿದ್ದ ಗೌತಮರ ಕೋಪವು ಶಮನವಾಗುವಂತೆ ಮಾಡಿ ಅಹಲ್ಯೆಯನ್ನು ಮತ್ತೆ ತಮ್ಮ ಪತ್ನಿಯನ್ನಾಗಿ ಸ್ವೀಕರಿಸುವಂತೆ ಮಾಡುತ್ತಾನೆ. ಅದಕ್ಕಾಗಿಯೇ ಶಿಲೆಯ ಸತಿಯಳ ಮಾಡಿ ಎಂದು ದಾಸರು ಸತಿ ಎನ್ನುವ ಶಬ್ದವನ್ನು ಬಳಸಿದ್ದಾರೆ. ಆಚಾರ್ಯರು ತಾತ್ಪರ್ಯನಿರ್ಣಯದಲ್ಲಿ ನಿರ್ಣಯಿಸಿದ ತತ್ವವಿದು

“ಸ್ವದರ್ಶನಾನ್ಮಾನುಷತಾಮುಪೇತಾಂ ಸುಯೋಜಯಾಮಾಸ ಸ ಗೌತಮೇನ”ಎಂದು. ಈ ಕಥೆಯ ಜತೆಯಲ್ಲಿಯೇ ಮತ್ತಷ್ಟು ತತ್ವಗಳನ್ನು ತಿಳಿಯಬೇಕು. ಅವನ್ನು ನಲವತ್ತಾರನೆಯ ಶ್ಲೋಕದ ವ್ಯಾಖ್ಯಾನದಲ್ಲಿ ತಿಳಿಸಲಾಗುವದು.

ತ್ರಿಪುರರ ಲಲನೆಯರ ವ್ರತಗೆಡಿಸಿ ಕೂಡಿದ : ರುದ್ರದೇವರು ಏನು ತ್ರಿಪುರಾಸುರರನ್ನು ಸಂಹರಿಸಿರುತ್ತಾರೆ, ಅವರಲ್ಲಿ ಮೊದಲನೆಯವನು ಕಲಿಯುಗದಲ್ಲಿ ಶುದ್ಧೋದನ ಎಂಬ ಹೆಸರಿನಿಂದ ಹುಟ್ಟಿ ಬಂದಿರುತ್ತಾನೆ. ಅವನ ಜತೆಯಲ್ಲಿಯೇ ಉಳಿದ ಮಹಾಸುರರೂ ಹುಟ್ಟಿ ಬಂದು ವೇದವ್ಯಾಸರ ಸಂಪ್ರದಾಯವನ್ನು ಕಲುಷಿತಗೊಳಿಸುವ ಉನ್ನಾಹದಲ್ಲಿರುತ್ತಾರೆ. ದೇವತೆಗಳಿಂದ ಪ್ರಾರ್ಥಿತನಾದ ಶ್ರೀಹರಿ ಬುದ್ಧರೂಪದಿಂದ ಅವತರಿಸಿ ಮೋಹಪ್ರದವಾದ ತನ್ನ ಮಾತುಗಳಿಂದ ಅವರನ್ನು ಮರುಳುಗೊಳಿಸುತ್ತಾನೆ. ಆ ದೈತ್ಯರೆಲ್ಲರೂ ವೇದವಿರೋಧಿಯಾದ ಸಿದ್ಧಾಂತವನ್ನು ಅನುಸರಿಸಲಾರಂಭಿಸಿದರೂ ಅವರ ಪತ್ನಿಯರು ವೇದೋಕ್ತವಾದ ಕ್ರಿಯೆಗಳನ್ನೇ ಆಚರಿಸುತ್ತಿರುತ್ತಾರೆ.

ಪರಮಾತ್ಮ ಅವರ ಮುಂದೆ ನಗ್ನನಾಗಿ ನಿಂತು ಅವರಲ್ಲಿ ಸ್ವಾಭಾವಿಕವಾಗಿ ಇದ್ದ ದುಷ್ಟಕಾಮವನ್ನು ಪ್ರಚೋದಿಸಿ ಅವರು ಕಾಮಾಸಕ್ತರಾಗುವ ಹಾಗೆ ಮಾಡುತ್ತಾನೆ. ಹೀಗೆ ಸನ್ಮಾರ್ಗದಲ್ಲಿ ಬಂದು ಆ ಮಾರ್ಗವನ್ನೇ ಕಲುಷಗೊಳಿಸುವ ಇರಾದೆಯನ್ನು ಹೊಂದಿದ್ದ ತ್ರಿಪುರರನ್ನೂ ತ್ರಿಪುರರ ಪತ್ನಿಯರನ್ನೂ ಪರಮಾತ್ಮ ತನ್ನ ಮಾತು ಕೃತಿಗಳಿಂದ ದಾರಿ ತಪ್ಪಿಸುತ್ತಾನೆ.

ಹೀಗೆ ದುಷ್ಟರ ಸಂಪರ್ಕಕ್ಕೆ ಒಳಗಾಗಿ ದುಷ್ಟಫಲವನ್ನು ಪಡೆದು ದುಃಖದಲ್ಲಿ ಬೀಳಬೇಕಾಗಿದ್ದ ಊರ್ವಶೀ ಬಲಿ ಮೊದಲಾದ-ವರನ್ನು ಕಾಯ್ದು, ಸನ್ಮಾರ್ಗದಲ್ಲಿ ನಡೆಯುವವರ ಹಾಗೆ ನಟಿಸಿ ಸನ್ಮಾರ್ಗವನ್ನೇ ಕಲುಷಗೊಳಿಸುವ ದುಷ್ಟರ ದಾರಿ ತಪ್ಪಿಸಿ, ದ್ರೌಪದೀ ಅಹಲ್ಯಾದಿ ಭಕ್ತರ ಉದ್ಧಾರ ಮಾಡಿದ ಕೆಲಸ ಉತ್ತಮವಾಯ್ತು, ಶ್ರೇಷ್ಠವಾದುದು ಎಂದು ಸಿದ್ಧವಾಯಿತು. ಆದ್ದರಿಂದ ಓ ಭಗವಂತ ನಮ್ಮನ್ನು ದುಷ್ಟರ ಆಕ್ರಮಣಕ್ಕೆ ಒಳಗಾಗದ ಹಾಗೆ ರಕ್ಷಿಸು, ಅನವರತವೂ ನಿನ್ನ ಭಕ್ತರಾಗಿರುವ ಹಾಗೆ ರಕ್ಷಿಸು ॥ ೩೦ ॥

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**"ವಿಶ್ವನಂದಿನಿ ಗಮ್ಯ ತಲುಪಲಿ"**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, "Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491